ಅ) ನಷ್ಟಕ್ಕೆ ಕಾರಣ ಅದಕ್ಷ ಆಡಳಿತವೇ ?

ಇ) ಹಾಗಿದ್ದಲ್ಲಿ ಆಡಳಿತ ವರ್ಗದ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಜೆ.ಹೆಚ್. ಪಟೇಲ್(ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು).–

ಅ) ಹೌದು. ಸಕ್ಕರೆ ಕಾರ್ಖಾನೆಯ ನಷ್ಟಕ್ಕೆ ಕಾರಣಗಳು :

೧ ಈ ಸಕ್ಕರೆ ಕಾರ್ಖಾನೆಯಲ್ಲಿ ಪರಿವರ್ತನಾ ವೆಚ್ಚವು ರಾಜ್ಯದಲ್ಲಿಯೇ ಅತಿ ಹೆಚ್ಚಿನ ದಾಗಿರುವುದು;

೨ ಕಬ್ಬಿನ ಗಾಣಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಸಾಗಾಣಿಕೆಯಾಗುವ ಕಬ್ಬಿನಿಂದಾಗಿ ಕಾರ್ಖಾನೆಯ ಕಬ್ಬು ಅರೆಯುವಿಕೆಯ ಪ್ರಮಾಣ ಕಡಿಮೆಯಾಗಿರುವುದು;

೩ ಯಂತ್ರೋಪಕರಣ ಆಯು ಕ್ಷಿತಪ್ಪುವಿಕೆಯಿಂದಾಗಿ ಇಳುವರಿ ಪ್ರಮಾಣ ಕಡಿಮೆ ಇರುವುದು.

ಇ) ಕಾರ್ಖಾನೆಯು ಹಣಕಾಸಿನ ದುರ್ವ್ಯಹಾರದಿಂದಲೂ ಸಹ ನಷ್ಟ ಅನುಭವಿಸಿದೆ ಎಂದು ಆಪಾದಿಸಲಾಗಿದೆ. ಈ ತರಹದ ನಷ್ಟ ಉಂಟಾಗಿರುವ ಪ್ರಕರಣಗಳ ಬಗ್ಗೆ ವಿಚಾರಣೆ ಮಾಡಲು ಲೋಕಾಯುಕ್ತಕ್ಕೆ ಕುಪನಿಯು ಮನವಿ ಮಾಡಿಕೊಳ್ಳಲಾಗಿದೆ.

ಹೊಸದುರ್ಗ ತಾಲ್ಲೂಕಿಗೆ ಹಾಲಿನ ಡೈರಿ

೭೪೦. ಶ್ರೀ ಜಿ. ರಾಮದಾಸ್ (ಹೊಸದುರ್ಗ).— ಮಾನ್ಯ ಪಶುಸಂಗೋಪನೆ ಮತ್ತು ಪಶು ವೈದ್ಯ ಸೇವೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಎಲ್ಲ ತಾಲ್ಲೂಕುಗಳಲ್ಲಿ ಹೈನು ಕೇಂದ್ರಕ್ಕೆ ಹಾಲು ಖರೀದಿ ಮತ್ತು ಹಾಲು ವಿತರಣೆಗೆ ವ್ಯವಸ್ಥೆ ಮಾಡಲು ಸರ್ಕಾರವು ಆಲೋಚಿಸಿದೆಯೆ ?

ಆ) ಹಾಗಿದ್ದಲ್ಲಿ ಸದರಿ ಸೌಲಭ್ಯಕ್ಕೆ ರಾಜ್ಯದ ಎಷ್ಟು ತಾಲ್ಲೂಕುಗಳು ಒಳಪಟ್ಟಿವೆ ?

ಇ) ಹೊಸದುರ್ಗ ತಾಲ್ಲೂಕನ್ನು ತುಮಕೂರು ಅಥವಾ ಶಿವಮೊಗ್ಗ ಹೈನು ಕೇಂದ್ರದ ವ್ಯಾಪ್ತಿಗೆ ಸೇರಿಸಲು ಸರ್ಕಾರ ಉದ್ದೇಶಿಸಿದೆಯೇ ?

ಶ್ರೀ ಸಿದ್ದರಾಮಯ್ಯ (ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ ಸಚಿವರು).—

ಅ) ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಹಾಲು ಉತ್ಪಾದಕರ ಸಹಕಾರಿ ಸಂಘಗಳನ್ನು ಸ್ಥಾಪಿಸಿ, ಹಾಲನ್ನು ಶೇಖರಿಸಿ, ವಿತರಣೆ ಮಾಡಲು ಯೋಜಿಸಲಾಗಿದೆ,

ಆ) ಈಗ, ೧೪ ತಾಲ್ಲೂಕುಗಳು.

ಇ) ಹೊಸದುರ್ಗ ತಾಲ್ಲೂಕು ಈಗಾಗಲೇ ತುಮಕೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ತುಮಕೂರು ಇದರ ಕಾರ್ಯವ್ಯಾಪ್ತಿಯಲ್ಲಿದೆ.

ಉಪಯೋಗಿಸಲ್ಪಡದೇ ಇರುವಂತಹ ಜಲಪಾತಗಳ ಸಂಖ್ಯೆ

೫೭೬. ಶ್ರೀಮತಿ ಮುಕ್ತರುನ್ನೀಸಾ (ನರಸಿಂಹರಾಜ).— ಮಾನ್ಯ ವಿದ್ಯುತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಇದುವರೆಗೆ ವಿದ್ಯುತ್ ಉತ್ಪಾದನೆಗೆ ಉಪಯೋಗಿಸಲ್ಪಡದೇ ಇರುವಂತಹ ಜಲಪಾತಗಳ ಸಂಖ್ಯೆ ಎಷ್ಟು ?

ಆ) ಸರ್ಕಾರವು ಈ ಜಲಪಾತಗಳಲ್ಲಿ ವಿದ್ಯುತ್ ಉತ್ಪಾದನೆಗಾಗಿ ಯಾವುದೇ ಹೊಸ ಜಲವಿದ್ಯುತ್ ಯೋಜನೆಗಳನ್ನು ಕೈಗೊಂಡಿದೆಯೇ ?

ಇ) ಹಾಗಿದ್ದಲ್ಲಿ ಈ ಯೋಜನೆಗಳ ಅಂದಾಜು ವೆಚ್ಚ ಮತ್ತು ಈ ಯೋಜನೆಗಳನ್ನು ಬೇಗನೆ ಪ್ರಾರಂಭಿಸಲಾಗುವುದೇ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಸಚಿವರು).—

ಅ) ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಗಾಗಿ ಉಪಯೋಗಿಸಲ್ಪಡದೇ ಇರುವ ಜಲಪಾತಗಳು ಅನೇಕ. ಇವುಗಳ ಸರಿಯಾದ ಸಂಖ್ಯೆ ಇಲ್ಲ. ಆದಾಗ್ಯೂ ವಿದ್ಯುತ್ ಉತ್ಪಾದನೆ ಮಾಡಲು ಈಗಾಗಲೇ ಕೆಲವು ಜಲಪಾತಗಳನ್ನು ಗುರುತಿಸಲಾಗಿದೆ.

ಆ) ಹೌದು.

ಇ) ಈ ಯೋಜನೆಗಳ ಅಂದಾಜು ವೆಚ್ಚಗಳನ್ನು ಪಟ್ಟಿ ರೂಪದಲ್ಲಿ ಸಮೂಹದಿಸಲಾಗಿದೆ. ಮಹದಾಯಿ ಮತ್ತು ಕಾವೇರಿ ಕಾಲಿಕ ಯೋಜನೆಗಳನ್ನು ಅನುಮೋದನೆ ಪಡೆದ ನಂತರ ಬೇಗನೆ ಪ್ರಾರಂಭಿಸ ಬಹುದು.

STATEMENT-I

Sl. No.	Name of the river with waterfalls	Installed Capacity MW	Annual energy genn MU	Cost Rs crores (Approx)	Remarks
A Project which could be implemented immediately :					
1.	Mahadayi Hydro Electric Project (POYAFALLS)	305	912	247	Detailed Project report submitted to State Govt.
2.	Shivasamudrum Seasonal Scheme on Cauvery river (Gaganachukki and Bharachukki falls)	2x135 270	929	129.45	Detailed project report submitted to Govt. of India for Approval.

1	2	3	4	5	6
B PROJECTS UNDER INVESTIGATION :					
1.	Kalinadi HEP (State-III)	2x200 -400	1110	403	
2.	Nethravathi High Head Schemes	335	1030	300	
3.	Aghanashini HEP (Lushington falls)	3x145	1600	350	
4.	Themnkal HE Scheme on Krishna river (Chaya falls)	300	1000	320	

ರಾಜ್ಯದಲ್ಲಿ ದನಗಳಿಗೆ ''ರಿಂಡರ್‌ಪೆಸ್ಟ್'' ರೋಗವನ್ನು ತಡೆಗಟ್ಟುವುದು

ಶ್ರೀ ಮಾಲಿಕಯ್ಯಾ ವಿ. ಗುತ್ತೇದಾರ್ (ಆಫಜಲ್‌ಪುರ).—ಮಾನ್ಯ ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯದಲ್ಲಿ ದನಗಳಿಗೆ ತಗಲಿದ ರಿಂಡರ್‌ಪೆಸ್ಟ್ ರೋಗ ಕರ್ನಾಟಕಕ್ಕೂ ಹಬ್ಬಿರುವುದು ನಿಜವೇ ?

(ಆ) ಹಾಗಿದ್ದಲ್ಲಿ ಈ ರೀತಿಯ ಎಷ್ಟು ಪ್ರಕರಣಗಳು ದಾಖಲಾಗಿವೆ ಮತ್ತು ಈ ರೋಗದಿಂದ ಮರಣ ಹೊಂದಿದ ದನಗಳ ಸಂಖ್ಯೆ ಎಷ್ಟು ?

(ಇ) ರೋಗವನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮ ಏನು ?

ಶ್ರೀ ಸಿದ್ದರಾಮಯ್ಯ (ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು).—

(ಅ) ನಿಜ.

(ಆ) ೧೯೮೭-೮೮ರಲ್ಲಿ (ನವೆಂಬರ್ ೧೯೮೭ರವರೆವಿಗೆ) ರೋಗವು ೨೪೫ ದನಗಳಲ್ಲಿ ಕಂಡು ಬಂದಿದ್ದು ಅವುಗಳಲ್ಲಿ ೧೩೧ ಮರಣ ಹೊಂದಿವೆ

(ಇ) ರೋಗ ತಡೆಗಟ್ಟಲು ಚುಚ್ಚು ಮದ್ದನ್ನು ಹಾಗೂ ಇತರ ಪ್ರತಿಬಂಧಕ ಕ್ರಮಗಳನ್ನು ಅನುಸರಿಸಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಪಟ್ಟಿ

ಶ್ರೀ ಎ. ಲಕ್ಷ್ಮಣಸಾಗರ್.—ಲಿಖಿತ ಮೂಲಕ ಉತ್ತರಿಸಲಾಗುವ ಪ್ರಶ್ನೆಗಳ ಹತ್ತನೆ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸಲಾಗುವ ಪ್ರಶ್ನೆಗಳ ಹತ್ತನೆ ಪಟ್ಟಿಯನ್ನು ಸಭೆಯ ಮುಂದಿಡಲಾಯಿತು.